# ‘ದಿವ್ಯ’ ಕಾದಂಬರಿಯಲ್ಲಿ ಬ್ರಾಹ್ಮಣ್ಯದ ಪರಿಕಲ್ಪನೆಗಳು

# Divya Kadambariyalli Bramannyada Pariklpanegalu

**Dr. K Anjanappa**
Associate Professor,
Dept of Kannada,
Tunga Mahavidyalaya,
Thirthahalli, Shivamogga Dist.,
Karnataka State.

ಯು.ಆರ್. ಅನಂತಮೂರ್ತಿ ಅವರ ದಿವ್ಯ ಕೃತಿಯಲ್ಲಿ ಬರುವ ಒಂದು ಮುಖ್ಯ ಪಾತ್ರ ಗೌರಿ, ದೇವರ ಕೂಸು, ಮಂಗಳಗೌರಿ, ಕೊಲ್ಲೂರು ಮೂಕಾಂಬಿಕೆ, ದೊಡ್ಡದೇವಿ, ಋಷಿಕನೆ, ಸಾಕ್ಷಾತ್ ಮೇರಿಯಮ್ಮ, ಮಿಸ್ಟೀರಿಯಸ್ ಆಗಿ ಕಾಣುವವಳು. ಇಂಥ ಗೌರಿಗೆ ಕುವೆಂಪು ಅವರ ಕಾನೂರು ಹೆಗ್ಗಡಿತಿ ಕಾದಂಬರಿಯನ್ನು ಓದಿದಾಗ ಎಂಥ ಅನುಭವವಾಗುತ್ತದೆಂಬುದನ್ನು ನಿರೂಪಕ ಹೇಳುವುದು ಹೀಗೆ:

“ಕಾನೂರು ಹೆಗ್ಗಡಿತಿಯನ್ನು ಓದಿದ ಎರಡು ಮೂರು ದಿನ ಗೌರಿಗೆ ಎಲ್ಲೆಲ್ಲೂ ಹೆಂಡದ ಹುಳಿವಾಸನೆಯೇ ಧಾರಕಾರವಾಗಿ ಸುರಿಯುವ ಮಳೆಯೇ, ದಟ್ಟವಾದ ಕಾಡೇ, ಕಾಡಿನ ತುಂಬ ಕದ್ದು ಹೊಂಚುವ ಬೇಟೆಗಾರರೇ.......” (ಪುಟ 50)

ಇದು ನಿಜ. ಸೃಜನಶೀಲ ಲೇಖಕನೊಬ್ಬ ತಾನು ಹುಟ್ಟಿ ಬೆಳೆದ ಪರಿಸರದ ವಾಸನೆಯನ್ನು ತನ್ನ ಕೃತಿಯಲ್ಲಿ ಒಡಮೂಡಿಸುವುದು ಸಹಜವೇ, ಹಾಗಾಗಿ ದಲಿತ ಲೇಖಕರ ಕೃತಿಗಳಲ್ಲಿ ದಲಿತಕೇರಿಯ ಸೊಗಡು, ಶೂದ್ರ ಲೇಖಕರ ಕೃತಿಗಳಲ್ಲಿ ಶೂದ್ರ ವಾಸನೆ, ಮುಸ್ಲಿಂ ಲೇಖಕರ ಕೃತಿಗಳಲ್ಲಿ ಮುಸ್ಲಿಂ ಪರಿಸರ ತುಂಬಿಕೊಳ್ಳುತ್ತದೆ. ಅನಂತಮೂರ್ತಿ ಅವರ ದಿವ್ಯ ಓದಿ ಮುಗಿಸಿ ದಾಗ ಅಗ್ರಹಾರದ ಕರ್ಮಠ ಬ್ರಾಹ್ಮಣರ ನಡುವೆ ನಡೆದಾಡಿದಂತಹ ಅನುಭವವಾಗುತ್ತದೆ!

ದಿವ್ಯದಲ್ಲಿ ಕಾಣಿಸುವ 'ಭೂವರಾಹ' ಮತ್ತು ‘ಅನ್ನಪೂರ್ಣೇಶ್ವರಿ’ ಆರಾಧನೆಗಳು ಬ್ರಾಹ್ಮಣ್ಯದ ಪ್ರತೀಕಗಳು. ಕೇಶವ ನಿತ್ಯ ಭೂವರಾಹ ವಿಗ್ರಹ ಪೂಜೆ ಮಾಡುವುದು, ಗೌರಿ ಮತ್ತು ವಿನೋದಿನಿ ಈ ಪೂಜೆಯನ್ನು ಬಲವಾಗಿ ಸಮರ್ಥಿಸುವುದು, ಮಂಜಯ್ಯ ತಾನು ಪೂಜಿಸದಿದ್ದರೂ ತಪ್ಪದೇ ಕೇಶವನಿಂದ ಮಾಡಿಸುವುದು, ಅಕ್ಕು ಈ ಪೂಜೆಗೆ ಸಹಕರಿಸುವುದು ಇವೆಲ್ಲ ಬ್ರಾಹ್ಮಣ್ಯವನ್ನು ಉಳಿಸಿಕೊಳ್ಳುವ ಪ್ರಯತ್ನಗಳೇ, ಬ್ರಾಹ್ಮಣ್ಯದ್ದು ಪೂಜಾ ಸಂಸ್ಕೃತಿ. ಅಬ್ರಾಹ್ಮಣರದು ಶ್ರಮ ಸಂಸ್ಕೃತಿ, ಪೂಜಾ ಸಂಸ್ಕೃತಿಯನ್ನು ಮುಂದು ಮಾಡಿಕೊಂಡು ಭಾರತ ವನ್ನು ಮತ್ತೆ ವ್ಯವಸ್ಥಿತವಾಗಿ ಪುರಾತನಕ್ಕೆ ನೂಕುವ ಆಶಯ ಇಲ್ಲಿದೆ.

ಘನಶ್ಯಾಮ ಈ ಭೂವರಾಹ ವಿಗ್ರಹವನ್ನು ತೆಗಿಸಿ ಅಲಂಕಾರಕ್ಕೆಂದು ಗೋಡೆಗೆ ಅಂಟಿಸುವುದು ಹೊಸಗಾಳಿ ಬೀಸುವಿಕೆಗೆ ಅನುವಾಗುತ್ತದೆಂದು ಅಂದುಕೊಳ್ಳುತ್ತಿರುವಾಗಲೇ ಗೌರಿಯ ಬಯಕೆಯಂತೆ ಮತ್ತೆ ಅದನ್ನು ತೆಗೆದು ಪೆಟ್ಟಿಗೆಯೊಳಕ್ಕೆ ಇಟ್ಟು ಭದ್ರಪಡಿಸುತ್ತಾನೆ. ಅಲ್ಲದೆ, ಭೂ ವರಾಹ ಪೂಜೆಯನ್ನು ನಿಲ್ಲಿಸಿ ಕ್ರಾಂತಿಯಡಿಗೆ ನಡೆಯುತ್ತಾನೆನ್ನುವುದರೊಳಗೆ ಸಂಸ್ಕೃತ ಕಲಿಸುವಿಕೆಗೆ, ಧರ್ಮಕ್ಕೆ ಸಂಬಂಧಿಸಿದಂತೆ ಸಂಶೋಧನೆಗೆ, ದಕ್ಷಿಣ ಕನ್ನಡದವರ ಮುಖ್ಯ ಕಲೆಯೊಂದಾದ ತಾಳಮದ್ದಲೆಯ ಅಕಾಡಮಿಯ ಸ್ಥಾಪನೆಗೆ ಮುಂದಾಗಿ ಬ್ರಾಹ್ಮಣ್ಯದ ಬೇರುಗಳು ಇನ್ನಷ್ಟು ಆಳಕ್ಕೆ ಇಳಿಯಲು ಸಹಕರಿಸುತ್ತಾನೆ.

ಅವೈಜ್ಞಾನಿಕವಾದ ಜ್ಯೋತಿಷ್ಯವನ್ನು ಪಠ್ಯವಾಗಿಸಬಾರದು ಎಂದು ಬುದ್ಧಿಜೀವಿಗಳು ಪ್ರತಿಭಟಿಸುತ್ತಿರುವ ಮತಧರ್ಮ ನಿರಪೇಕ್ಷತೆಯ ಈ ಕಾಲದಲ್ಲಿ ಹದಿನಾರಾಣೆ ಬ್ರಾಹ್ಮಣ ಕೃಷ್ಣಶಾಸ್ತ್ರಿ ಎಂಬ ಜ್ಯೋತಿಷಿ ಪಾತ್ರವನ್ನು ಸೃಷ್ಟಿಸಿ, ಈತನ ಜ್ಯೋತಿಷ್ಯದಂತೆ ಕಾದಂಬರಿ ಬೆಳೆಯುತ್ತಾ ಹೋಗುವಂತೆ ಚಿತ್ರಿಸಿರುವುದು ಅನಂತಮೂರ್ತಿ ಅವರಿಗಿರುವ ಬ್ರಾಹ್ಮಣ್ಯದ ಮೇಲಿನ ಅಪಾರ ವ್ಯಾಮೋಹವನ್ನು ದೃಢಪಡಿಸುತ್ತದೆ. 'ನಮ್ಮ ಹುಡುಗಿಯ ಜಾತಕ ನೋಡಿ ಹೇಳಬೇಕು' ಎಂದು ಗೌರಿಯ ಬಗೆಗೆ ಅಕ್ಕು ಕೇಳಿದಾಗ ಕೃಷ್ಣಶಾಸ್ತ್ರಿ:

ಜಾತಕವೇಕೆ", ಮುಖದಿಂದಲೇ ತಿಳಿಯುತ್ರ ಮಂಗಳಗೌರಿ ಇವಳಲ್ಲಿ ನೆಲೆಸಿದ್ದಾಳೆ. ಮೂರು ಲೋಕಗಳ ವಿದ್ಯಮಾನಗಳನ್ನು ಅರಿಯಬಲ್ಲ ಯೋಗ ಪ್ರಾಪ್ತಿಯಾಗಿರುವಂತೆ ತೋರುತ್ತದೆ. ಕಾಲವಾದ ಇವಳ ತಂಗಿಯೇ ವಿದ್ಯಾರೂಪಿಣಿಯಾದ ಶಕ್ತಿಯಾಗಿ ಇವಳಲ್ಲಿ ನೆಲೆಸಿದ್ದಾಳೆ. ಸಾಕ್ಷಾತ್ ಶಿವನೇ ಮನುಷ್ಯ ರೂಪಿಯಾಗಿ ಹುಟ್ಟಿ ಬಂದರೆ ಇವಳಿಗೆ ಅನುಕೂಲವಾಗುವ ಜಾತಕ ಪಡೆದಿರುತ್ತಾನೆ. ಪುರುಷ ಗಂಧರ್ವನೊಬ್ಬ ಇವಳಲ್ಲಿ ಅನುರಕ್ತನಾಗಲಿದ್ದಾನೆ; ದನಗಾಹಿಯಾದ ವನದೇವತೆಯೊಂದು ಇವಳಲ್ಲಿ ಮೋಹಿತವಾಗಲಿದೆ; ಇಂಥ ಶಕ್ತಿಗಳ ಸಾನ್ನಿಧ್ಯದಲ್ಲಿ ಇವಳು "ಸ್ತ್ರೀಯಾಗಿ ಲೋಕಕ್ಕೆ ಮಂಗಳ ಉಂಟು ಮಾಡಲಿ......" (ಪುಟ 44–45) ಇನ್ನೂ ಹೀಗೆ ಹೇಳುತ್ತಾ ಹೋಗುತ್ತಾನೆ. ವಿಧವೆಯಾಗಿರುವ ಅಕ್ಕುಗೆ ನೀವು ಹುಟ್ಟಿದ್ದು ಪ್ರಥಮನ ಏಕಾದಶಿಯ ಒಂದು ಬುಧವಾರ, ಪುಷ್ಯಾ ನಕ್ಷತ್ರದಲ್ಲಿ ನಿಮಗೆ ಪುತ್ರ ಸಂತಾನದ ಯೋಗವಿದೆಯೆಂದು ಜ್ಯೋತಿಷ್ಯ ಹೇಳುತ್ತದೆ. ಆದರೆ ಹೇಗೆ ಎಂದು ಕೇಳಬೇಡಿ. ಜ್ಯೋತಿಷ್ಯ ಸುಳ್ಳಾಗುವುದಿಲ್ಲ ಎಂದರೆ ಗಾಬರಿಯಾಗಬೇಡಿ......" (ಪುಟ 46) ಎಂಬುದು ಭವಿಷ್ಯ ನುಡಿಯುತ್ತಾನೆ. ಕಾದಂಬರಿಯುದ್ದಕ್ಕೂ ಕೃಷ್ಣಶಾಸ್ತ್ರಿಯ ಜ್ಯೋತಿಷ್ಯ ನಿಜವಾಗುತ್ತ ಹೋಗುತ್ತದೆ. ಮುಖ ನೋಡಿ ಮುಂದೆ ಆಗುವುದನ್ನೆಲ್ಲ ಹೇಳುವ ಸಾಮರ್ಥ್ಯ ಜೋತಿಷ್ಯಕ್ಕೆ ಇದ್ದಿದ್ದೇ ಆಗಿದ್ದರೆ ವಿಜ್ಞಾನದ ಮತ್ತು ತಂತ್ರಜ್ಞಾನದ ಅವಶ್ಯಕತೆಯೇ ಇರುವುದಿಲ್ಲ. ಲಕ್ಷಾಂತರ ಜೀವ ಹಾನಿಯನ್ನು ಜ್ಯೋತಿಷ್ಯದಿಂದ ಉಳಿಸಬಹುದಿತ್ತು ಅಲ್ಲವೆ? ಕೃಷ್ಣಶಾಸ್ತ್ರಿ ಎಂಬ ಬಫೂನ್ ಪಾತ್ರ ಸೃಷ್ಟಿಸಿ, ಜ್ಯೋತಿಷ್ಯ ನಿಜವಾಗುವಂತೆ ನೋಡಿಕೊಂಡಿರುವಲ್ಲಿ ಅನಂತಮೂರ್ತಿ ಅವರಿಗೆ ಬ್ರಾಹ್ಮಣ್ಯವನ್ನು ಬೆಚ್ಚಗೆ ಕಾಪಾಡುವ ಬಯಕೆ ಇರುವುದು ಸ್ಪಷ್ಟ, ಕೃಷ್ಣಶಾಸ್ತ್ರಿಯ ಕಾಯಕ ಅನ್ನಪೂರ್ಣೇಶ್ವರಿ ಉತ್ಸವದ ಆಮಂತ್ರಣ ಪತ್ರಿಕೆಯನ್ನು ಮನೆ ಮನೆ ಬಾಗಿಲಿಗೆ ಅಂಟಿಸುವುದು. ಆಮಂತ್ರಣ ಪತ್ರಿಕೆಯಲ್ಲಿನ ಸಂದೇಶವೆಂದರೆ "ಎಲ್ಲೂ ಅಣೆಕಟ್ಟು ಕಟ್ಟಬಾರದು, ವಿದ್ಯುಚ್ಛಕ್ತಿಯ ಬಳಕೆಯನ್ನು ಹೆಚ್ಚಿಸಬಾರದು, ಕಾಫಿ ಮತ್ತು ಚಹಾದ ಚಟ ಬೆಳೆಯಬಾರದು, ಪೆಟ್ರೋಲಿನ ಬಳಕೆ ಹೆಚ್ಚದಂತೆ ನೋಡಿಕೊಳ್ಳಬೇಕು, ಅನಗತ್ಯ ರುಚಿಗಳನ್ನು ನಾಲಗೆಗೆ ಕಲಿಸಬಾರದು....." (ಪುಟ – 173)

ಅನ್ನಪೂರ್ಣೇಶ್ವರಿ ಅರ್ಚಕರಾದ ಸುಬ್ರಹ್ಮಣ್ಯ ಅವಧಾನಿಯ ವಿಚಾರಧಾರೆ ಎಂದರೆ "ತುಂಗಾ ನದಿಗೆ ಸೇತುವೆಯಾಗತಕ್ಕದಲ್ಲ, ಎಣ್ಣೆ ದೀಪ ಹೊರತಾಗಿ ಬೇರೆ ಯಾವ ದೀಪವನ್ನು ಹಚ್ಚುವಂತಿಲ್ಲ, ಅನ್ನ ವಿಕ್ರಯ ಮಾಡುವ ಹೋಟಲು ಇರತಕ್ಕದ್ದಲ್ಲ, ಹಣ್ಣುಗಳನ್ನು ಬಿಟ್ಟು, ವ್ಯವಹಾರವನ್ನಿಸುವ ಬೆಳೆಗಳನ್ನು ಬೆಳೆಯುವಂತಿಲ್ಲ.........." (ಪುಟ – 171)

ಇಡೀ ಜಗತ್ತು ಏಕೀಕೃತಗೊಳ್ಳುತ್ತಿರುವ ಭರಾಟೆಯ ಈ ಹೊತ್ತಿನಲ್ಲಿ ಕೃಷ್ಣಶಾಸ್ತ್ರಿ ಮತ್ತು ಅವಧಾನಿ ಬ್ರಾಹ್ಮಣಿಕೆಯನ್ನು ಉಳಿಸಿಕೊಳ್ಳಲು ಒಡಿದಾಡುತ್ತಿರುವುದು ಹಾಸ್ಯಾಸ್ಪದ. ಇದನ್ನು ದೇಶೀಯತೆಯ ಹಿತ ಕಾಪಾಡುವಿಕೆಗೆ ಎನ್ನಲಾಗದು. ದೇಶೀಯತೆ ಎಂದರೆ ಬ್ರಾಹ್ಮಣ್ಯವಲ್ಲ. ಹಾಗೆ ನೋಡಿದರೆ ಬ್ರಾಹ್ಮಣ್ಯ ಈ ನೆಲದ್ದೇ ಅಲ್ಲ ಎಂಬುದು ಐತಿಹಾಸಿಕ ಸತ್ಯ. ಇಲ್ಲಿನ ದಲಿತ ಶೂದ್ರರು ದೇಶೀಯತೆಯ ನಿಜ ವಾರಸುದಾರರು. ಈ ದೃಷ್ಟಿಯಿಂದಲೂ ದಿವ್ಯ ದಿವ್ಯವಾಗದೆ ಹೋಗುತ್ತದೆ.

ಘನಶ್ಯಾಮ ಭೂವರಾಹ ವಿಗ್ರಹಪೂಜೆಯನ್ನು ನಿಲ್ಲಿಸಿದಾಗ ಅದನ್ನು ಮನೆಗೆ ತಂದಾದರೂ ಪೂಜೆಯನ್ನು ಮುಂದುವರಿಸುತ್ತೇನೆ ಎಂದು ಕೇಶವ ಹೇಳಿದಾಗ ಕೃಷ್ಣಶಾಸ್ತ್ರಿ

"ಬ್ರಾಹ್ಮಣರು ಮಾತ್ರ ಭಿಕ್ಷಾನ್ನಕ್ಕೆ ಅರ್ಹರು ಅಂತ ನಮ್ಮ ಸಮಾಜ ಯಾಕೆ ತಿಳಿದುಕೊಂಡು ಬಂದಿತ್ತು ಹೇಳ್ತಿನಿ ಕೇಳಿ, ಒಳ್ಳೆಯ ಕಾಲವೊಂದಿತ್ತು. ಆಗ ಬ್ರಾಹ್ಮಣರು ಇಡೀ ಲೋಕಕ್ಕೆ ಉಪಯುಕ್ತವೆನ್ನಿಸಿದ ವೇದಾಧ್ಯಯನದಲ್ಲಿ ಅಹರ್ನಿಶಿ ನಿರತರಾಗಿದ್ದರು........ ಬ್ರಾಹ್ಮಣ ಈ ಅಪೌರುಷೇಯ ಮಂತ್ರಗಳನ್ನು ಒಂದಕ್ಷರದ ಕೆಡದ ಹಾಗೆ ನೆನಪಿನಲ್ಲಿ ಉಳಿಸಿಕೊಳ್ಳೋ ಕೆಲಸವನ್ನು ಪರಂಪರಾನುಗತವಾಗಿ ಮಾಡ್ತಾನೆ ಅಂತ, ಅದೊಂದು ಉಪಯುಕ್ತವಾದ ಕೆಲಸ ಅಂತ ಸಮಸ್ತರೂ ತಿಳಿದಿದ್ದರಿಂದ........." (ಪುಟ – 158) ಎಂದು ಹೇಳುತ್ತಾನೆ. ಇಡೀ ಲೋಕಕ್ಕೆ ಉಪಯುಕ್ತವೆನ್ನಿಸಿದ ವೇದಾಧ್ಯಯನ ಯಾರಿಗೆ ಉಪಯುಕ್ತವಾಗಿತ್ತು ಎಂಬುದನ್ನು ಮತ್ತು ಉಪಯುಕ್ತವಾದ ಕೆಲಸ ಅಂತ ಸಮಸ್ತರೂ

ತಿಳಿದಿದ್ದರು ಎನ್ನುವಲ್ಲಿ ಯಾವ ಸಮಸ್ತರು ತಿಳಿದಿದ್ದರು ಎಂಬ ಪ್ರಶ್ನೆಗಳು ಇಲ್ಲಿ ಉದ್ಭವವಾಗುತ್ತವೆ. ವೇದಾಧ್ಯಯನ ಉಪಯುಕ್ತವೆನ್ನಿಸಿದ್ದು ಅಕ್ಷರಸ್ಥರಿಗೆ ಮಾತ್ರ. ಅವುಗಳನ್ನು ನೆನಪಲ್ಲಿಟ್ಟುಕೊಳ್ಳುವ ಕೆಲಸ ಉಪಯುಕ್ತ ಅನ್ನಿಸಿದ್ದೂ ಅಕ್ಷರಸ್ಥರಿಗೇ ಆ ಕಾಲದಲ್ಲಿ ಅಕ್ಷರಸ್ಥರಾಗಿದ್ದವರು ಪೂಜಾ ಸಂಸ್ಕೃತಿಯ ಬ್ರಾಹ್ಮಣರೇ ಏನು ಶ್ರಮ ಸಂಸ್ಕೃತಿಯ ಅಬ್ರಾಹ್ಮಣರಲ್ಲ. ಶ್ರಮಿಕರಿಗೆ ವೇದಾಧ್ಯಯನದ ಅಗತ್ಯವೂ ಇರಲಿಲ್ಲ.

ಕುಮಾರವ್ಯಾಸ ಭಾರತ, ಪೌರಾಣಿಕ ಕಥಾಭಾಗಗಳು, ಈಶೋಪನಿಷತ್ತಿನ ಸಾರ, ಗರುಡವಾಹನನ ಸ್ತುತಿ, ಭೂವರಾಹ ಪೂಜೆ, ಅನ್ನಪೂರ್ಣೇಶ್ವರಿ ಆರಾಧನೆ, ದಿವ್ಯಪ್ರಾಣಿ ಆಗಮನ, ಕಪ್ಪು ಬೆಕ್ಕು ಬಂದು ಹೋಗುವುದು ಇವೆಲ್ಲವನ್ನೂ ದಿವ್ಯ ಕೃತಿಯಲ್ಲಿ ಯಥೇಚ್ಛವಾಗಿ ಬಳಸಿಕೊಂಡಿರುವ ಅನಂತಮೂರ್ತಿ 'ದ್ವಿಜಭಾರತ' ಪ್ರತಿಷ್ಠಾಪನೆಗೆ ಪಣ ತೊಟ್ಟಿರುವಂತೆ ಕಾಣುತ್ತದೆ.

ಬ್ರಾಹ್ಮಣ್ಯದ ಮೆರವಣಿಗೆಯ ಜೊತೆಗೆ ದಿವ್ಯ ಗೊಂದಲಗಳ ಗೂಡಾಗಿದೆ. ಗೊಂದಲವನ್ನು ವ್ಯಕ್ತಿತ್ವದಲ್ಲಿನ ಸಂಕೀರ್ಣತೆ ಎಂದು ತಿಳಿಯಬಹುದಾದರೆ ಇಲ್ಲಿನ ಗೊಂದಲಮಯ ಪಾತ್ರಗಳಿಂದ ಹೊಮ್ಮುವ ಆಶಯ ಯಾವುದು ಎಂಬುದನ್ನು ಗಮನಿಸಬೇಕಾಗುತ್ತದೆ. ವ್ಯಕ್ತಿತ್ವದಲ್ಲಿರಬಹು ದಾದ ಸಂಕೀರ್ಣತೆಯನ್ನು ಉದ್ದೇಶಪೂರ್ವಕವಾಗಿ ಪ್ರತಿಗಾಮಿ ನಿಲುವುಗಳನ್ನು ವೈಭವೀಕರಿಸಲು ಬಳಸಿಕೊಳ್ಳುವುದು ಬಹು ಅಪಾಯಕಾರಿ, ಈ ಹಿನ್ನೆಲೆಯಲ್ಲಿ ಇಲ್ಲಿಯ ಎಲ್ಲ ಮುಖ್ಯ ಪಾತ್ರಗಳು ಬ್ರಾಹ್ಮಣ್ಯವನ್ನು ಪೋಷಿಸುವ ಕಾಳಜಿಯುಳ್ಳವಾಗಿವೆ. ಇದರಿಂದ ಪಾತ್ರಗಳು, ಪ್ರಗತಿಗಾಮಿ ಮನಸುಗಳಿಗೆ ಆಪ್ತವಾಗುವುದಿಲ್ಲ.

ಘನಶ್ಯಾಮ ತನ್ನ ತಂದೆ ಮಂಜಯ್ಯನಿಂದ ಬಂದ ಐದು ನೂರು ಎಕರೆ ಭೂಮಿಯನ್ನು ಕಾನೂನಿನ ಅಡಿಯಲ್ಲಿ ನಿಜವಾಗಿ ಉಳುವಾತನಿಗೆ ಹಂಚಲು ನಿರ್ಧರಿಸುತ್ತಾನೆ. ಹಾಗೆಂದು ಪ್ರಚಾರ ಮಾಡಿದ್ದಾನೆ. ಆದರೆ ಮೊದಲು ಮಾಡಿದ್ದು ಟ್ರಸ್ಟನ್ನು, ರೈತರು ಕೊಡುವ ಗೇಣಿ ಟ್ರಸ್ಟಿನ ಖಾತೆಗೆ ಸಂದಾಯವಾಗುತ್ತದೆ. ಆ ಹಣದಿಂದ ಆಸ್ಪತ್ರೆ, ಶಾಲೆ, ಕಾಲೇಜನ್ನು ತೆರೆಯಬೇಕೆಂದಿದ್ದಾನೆ. ಜೊತೆಗೆ ಸಂಸ್ಕೃತ ಕಲಿಸುವಿಕೆಗೆ, ರಿಲಿಜನ್ನಿಗೆ ಸಂಬಂಧಿಸಿದಂತೆ, ಸಂಶೋಧನೆಗೆ ಅವಕಾಶ ಮಾಡಿಕೊಡಬೇಕೆಂದಿದ್ದಾನೆ. ಅಂದರೆ, ರೈತರು ಭೂ ಒಡೆಯರಾಗುವ ಕನಸು ಕಾಣುತ್ತಲೇ ಇದ್ದು ಬ್ರಾಹ್ಮಣ್ಯವನ್ನು ಬಲಪಡಿಸುವ ಘನಶ್ಯಾಮನ ಮಹಾಕಾರಕ್ಕೆ ಜೀತ ಮಾಡುತ್ತಲೇ ಇರಬೇಕೆಂಬುದು ಇಲ್ಲಿನ ಆಶಯ. ಟ್ರಸ್ಟ್ ಹೆಸರಲ್ಲಿ ಶೋಷಣೆ ಮುಂದುವರಿಯುತ್ತದೆ. ಭೂವರಾಹ ಪೂಜೆಯನ್ನು ನಿಲ್ಲಿಸುತ್ತಲೇ ಸಂಸ್ಕೃತ ಕಲಿಸುವಿಕೆಗೆ ವ್ಯವಸ್ಥಿತವಾದ ಯೋಜನೆಯನ್ನು ರೂಪಿಸುವುದು ಇಲ್ಲಿನ ದೊಡ್ಡ ಗೊಂದಲ.

ಮಹಾಭೋಗಿಯಾದ ಮಂಜಯ್ಯ ಘನಶ್ಯಾಮನ ತಂದೆ. ಗಾಂಧೀಜಿಯವರ ಅನುಯಾಯಿ. ಹೀಗಿದ್ದುಕೊಂಡೇ ಅಪಾರವಾದ ಆಸ್ತಿ ಮಾಡಿದವರು. ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷಗಿರಿಯೂ ಬೇಕೆನ್ನುವವರು, ಅಮಾನವೀಯ ವ್ಯಕ್ತಿತ್ವದ ಬ್ರಾಹ್ಮಣ ಗಣಪಯ್ಯನ ಪರವಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳಿದವರು. ಇಷ್ಟಾದರೂ ಭೂವರಾಹ ವಿಗ್ರಹ ಪೂಜೆ ಪ್ರತಿನಿತ್ಯ ನಡೆಯಬೇಕನ್ನುವವರು.

ಜಲಜ ಕಷ್ಟದಲ್ಲಿದ್ದಾಗ ಅವಳು ಮಾಡಿರುವುದು ತಪ್ಪೆಂದು ಗೊತ್ತಿದ್ದರೂ ಸರಿರಾತ್ರಿ ಸಹಾಯ ಮಾಡಿದ್ದು, ಅನೈತಿಕ ಸಂಬಂಧದಿಂದ ಹುಟ್ಟಿದ ಮಗುವೆಂದು ಗೊತ್ತಿದ್ದೂ ಆರೈಕೆ ಮಾಡುವುದು 'ದಿವ್ಯ'ವೆಂಬ ದ್ವಿಜಭಾರತ ಅಕ್ಕುವಿನ ದೊಡ್ಡ ಗುಣವೇ ಸರಿ. ಆದರೆ ಕೇಶವ ಅಕ್ಕಮಹಾದೇವಿ ಕಥೆ ಹೇಳಿದ್ದಕ್ಕೆ

"ಬೆತ್ತಲೆ ಓಡಾಡೊ ಹೆಂಗಸರ ಕಥೆಯನ್ನು ಬೆಳೀತಿರೋ ಹೆಣ್ಣು ಮಕ್ಕಳಿಗೆ ಅದೇನು ನೀನು ಹೇಳೋದೊ? ಜಾತಿ ನೀತಿ ನಿನಗೆ ಬೇಡವ?" (ಪುಟ – 36)

ಎಂದು ಕೇಳುವುದು ಮತ್ತು –

"ದೇವರಂಥ ಗಾಂಧಿಗೆ ಸರಿಯಾದ್ದು ನಮಗೂ ಸರಿಯ? ಜಾತಿಗೀತಿ ಎಲ್ಲ ಸುಳ್ಳಂತ ತಿಳಿದು ನಮ್ಮ ಮಕ್ಕಳು ಬೆಳೀಬೇಕ?" (ಪುಟ–36)

ಎಂದು ಪ್ರಶ್ನಿಸಲು ಅವಳಲ್ಲಿರುವ ಗೊಂದಲವೇ ಕಾರಣ. ಇಲ್ಲಿನ ವಿಪರಾಸವೆಂದರೆ ಮಂಜಯ್ಯ ಗೌರಿಯ ಬಳಿ

"ಮಹಾತ್ಮರಿಗೆ ನಿಮ್ಮ ಅಕ್ಕಯ್ಯ ತುಂಬ ಇಷ್ಟವಾಗ್ತ ಇದ್ದರು" (ಪುಟ – 135) ಎಂದು ಹೇಳುವುದು!

ಅನಂತಮೂರ್ತಿ ಅವರನ್ನೇ ನೆನಪಿಸುವಂತಿರುವ ಕೇಶವ ಕೂಡ ಗೊಂದಲಗಳಿಂದ ದೂರವಿಲ್ಲ. 'ಕರಿಯನಿಗಾಗಿ ಗೌರಿ ಮಡಿಯುವ ಬಗೆ ಕಂಡು ಕೇಶವನಿಗೆ ವರ್ಣ ವ್ಯವಸ್ಥೆಯಲ್ಲಿ ಅವನು ಮೆಚ್ಚಿಕೊಂಡಿದ್ದ ಅದರ ಅಚ್ಚುಕಟ್ಟಿನ ಬಗ್ಗೆಯೇ ಅನುಮಾನವಾಗುತ್ತದೆ, ನೀಲಮೇಘಶಾಮನೇ ಅವನು' ಎಂದೆಲ್ಲಾ ಹೊಲೆಯರ ಕರಿಯನ ಬಗ್ಗೆ ಆಲೋಚಿಸುವ ಕೇಶವ ತನ್ನ ಬಾಲ್ಯದ ಜೀವ ಗೆಳೆಯ ಶೂದ್ರ ಪುಟ್ಟೇಗೌಡ ಕೇಶವನ ಮನೆಯ ಹೊರಗೆ ಚಿಟ್ಟೆಯ ಮೇಲೆ ಕುಳಿತು ಊಟ ಮಾಡಿ, ತಾನೇ ಎಲೆ ತೆಗೆದು, ಗೋಮಯ ಹಾಕಿ ಸ್ವಚ್ಛ ಮಾಡಿ ಹೋಗಬೇಕೆನ್ನುವವನು. ದೈವಾಂಶ ಸಂಭೂತೆಯಂತಿರುವ ಗೌರಿ ಮತ್ತು ಗಾಂಧೀಜಿಯ ತುಣುಕಿನಂತಿರುವ ಅಕ್ಕು ಅವರ ಸಮಕ್ಷಮದಲ್ಲಿ ಉಗ್ರ ವಿಚಾರವಾದಿ ಪುಟ್ಟೇಗೌಡ ಹಾಗೆಯೇ ಮಾಡುತ್ತಾನೆ. (ಪುಟ–127) ಹೊಲೆಯರ ಕರಿಯನನ್ನು ಕನಿಕರದಿಂದ ಕಾಣುವ ಕೇಶವ, ಹೊಲೆಯರ ಕರಿಯನಲ್ಲಿ ಕೃಷ್ಣನನ್ನು ಕಾಣುವ ಗೌರಿ, ಅನೈತಿಕ ಬದುಕುಗಳಿಗೆ ಸಹಾಯ ಮಾಡುವ ಅಕ್ಕು ಇವರು ಬ್ರಾಹ್ಮಣತ್ವದಿಂದ ಕಳಚಿಕೊಳ್ಳದೆ ವೈಚಾರಿಕತೆಯನ್ನು ಒಳಗಿಳಿಯಲೂ ಬಿಡದೆ ಆ ವೈಚಾರಿಕತೆಯನ್ನು ಕೇವಲ ತೋರಿಕೆಗೆ ಇಟ್ಟುಕೊಳ್ಳುವವರು.

"ಐನೂರು ವರ್ಷಗಳಿಂದ ನಿತ್ಯ ಪೂಜಿಸಿದ ಒಂದು ವಿಗ್ರಹಾನ್ನ ಹೀಗೆ ಗೋಡೆಯ ಚಂದಕ್ಕಿಂತ ಇಟ್ಟಿದೀರಲ್ಲ. ನಿಮಗೆ ಹೇಗೆ ಇದು ಸಾಧ್ಯವಾಯ್ತು? ನೀವೇನು ಮನುಷ್ಯರ?......." (ಪುಟ – 179)

ಎಂದು ಮೂದಲಿಸುತ್ತಾಳೆ. ಮಂಜಯ್ಯ ಇಟ್ಟುಕೊಂಡಿದ್ದ ಮೀನಾಕ್ಷಿಯ ಮಗಳು ವಿನೋದಿನಿ ಕೂಡ–

"ಭೂವರಾಹ ಪೂಜೆ ನಿಲ್ಲಿಸೋದನ್ನು ನಾನು ಒಪ್ಪಲ್ಲ. ಐನೂರು ವರ್ಷದ ಒಂದು ಸಂಪ್ರದಾಯವನ್ನು ಮುರಿಯೋ ಹಕ್ಕು ಮಕ್ಕಳಿಗೆ ಇದೆ ಅಂತ ನನಗೆ ಅನ್ನಿಸಲ್ಲ" ಎಂದೆನ್ನುತ್ತಾಳೆ.

ಜಯಪ್ರಕಾಶ ನಾರಾಯಣರಿಂದ ಪ್ರಭಾವಿತನಾಗಿರುವ, ಸತ್ಯಾಗ್ರಹ ಮಾಡಿ ಜೈಲಿಗೆ ಹೋಗಿ ಬಂದಿರುವ, ಸೋಷಲಿಸ್ಟರಿಗೆ ಬೆಂಬಲ ನೀಡುವ, ಕುವೆಂಪು ಅವರನ್ನು ಓದಿಕೊಂಡಿರುವ ಉಗ್ರ ವಿಚಾರವಾದಿ ಶೂದ್ರ ಪುಟ್ಟೇಗೌಡ ಜ್ಯೋತಿಷ್ಯ ಹೇಳುವ ಕೃಷ್ಣಶಾಸ್ತ್ರಿ ಮತ್ತು ಬ್ರಾಹ್ಮಣ್ಯದ ಮಹಾ ಪಿಂಡದಂತಿರುವ ಅವಧಾನಿಯ ಬೆಂಬಲಿಗನಾಗುವುದು (ಪುಟ – 173) ಇಲ್ಲಿನ ದೊಡ್ಡ ಗೊಂದಲ.

ಬ್ರಾಹ್ಮಣ್ಯಕ್ಕೆ ಯಾವ ಧಕ್ಕೆಯೂ ಆಗಬಾರದು, ಅದರ ಅಸ್ತಿತ್ವದ ನೆರಳಲ್ಲಿಯೇ ಇತರ ಜನಾಂಗ ಬದುಕಬೇಕನ್ನುವ ಕಾದಂಬರಿಕಾರರ ಆಶಯ ಈ ಗೊಂದಲದ ಹಿಂದಿರುವುದು ಸ್ಪಷ್ಟವಾಗುತ್ತದೆ. ಆದ್ದರಿಂದಲೇ ಇಲ್ಲಿನ ಯಾವ ಪಾತ್ರಗಳು ಆಪ್ತವಾಗುವುದಿಲ್ಲ.

ಸಂಸ್ಕಾರ ಕಾದಂಬರಿಯಿಂದಲೂ ರಕ್ಷಿಸಿಕೊಂಡು ಬಂದಿರುವ ಸವಕಲು ತಂತ್ರವನ್ನು ಅನಂತ ಮೂರ್ತಿ ಅವರು ದಿವ್ಯದಲ್ಲೂ ಬಳಕೆ ಮಾಡಿದ್ದಾರೆ. ಈ ತಂತ್ರದಿಂದಾಗಿ ಕೃತಿಯೊಂದು ಏಕಕಾಲ ರಲ್ಲಿ ಬ್ರಾಹ್ಮಣರನ್ನೂ ದಲಿತರನ್ನೂ ತೃಪ್ತಿಗೊಳಿಸುತ್ತದೆ. ಪರಸ್ಪರ ಸಂಘರ್ಷಿಸುವ ಇವೆರಡನ್ನೂ ಒಡಿದು ಬಂಡಿಗೆ ಹೂಡಿ ಹೊಡೆಯುವ ಈ ಕೃತಿಯಲ್ಲಿನ ಕಸುಬುಗಾರಿಕೆ ಮೆಚ್ಚುವಂತಹದು.

ಬ್ರಾಹ್ಮಣ್ಯಕ್ಕಾಗಿ ದುಡಿಯುವ ಅವಧಾನಿಯ ಮಗ ಅರ್ಚಕ ವೃತ್ತಿಯಿಂದ ದೂರ ರಿಯುವುದು ಅರ್ಚಕತನದ ಅವನತಿಯ ಸಂಕೇತ ಎಂದು ಅಬ್ರಾಹ್ಮಣರು ಸಂಭ್ರಮ ತಡುವಂತಿದ್ದರೆ, ಅವನು ಭಗವದ್ಗೀತೆಯನ್ನು ಇಂಗ್ಲೀಷ್‌ಲ್ಲಿ ಹೇಳುವ ಮೋಹಕ್ಕೆ ಒಳಗಾಗುವುದು ಗೀತೆಯ ಸಾರ ಕಡಲಾಚೆಗೂ ಮುಟ್ಟುವ ಖುಷಿಗೆ ಬ್ರಾಹ್ಮಣರು ಒಳಗಾಗುತ್ತಾರೆ. ಬ್ರಾಹ್ಮಣ್ಯಕ್ಕಾಗಿ ಬೆವರು ಸುರಿಸುವ ಕೃಷ್ಣಶಾಸ್ತ್ರಿಯ ಮಗ ಅನ್ನ ವಿಕ್ರಯ ಮಾಡುವುದು ಬ್ರಾಹ್ಮಣ್ಯದ ಅವನತಿ ಎಂದು ಅಬ್ರಾಹ್ಮಣರು ತಿಳಿದಿದ್ದರೆ, ಘನಶ್ಯಾಮ ಸಂಸ್ಕೃತ ಕಲಿಕೆಗೆ, ಮರ್ಕ್ಕೆ ಸಂಬಂಧಿಸಿದ ಸಂಶೋಧನಾಲಯ ತೆರೆಯುವುದು ಬ್ರಾಹ್ಮಣರನ್ನು ಸಂತೋಷ ಡಿಸುತ್ತದೆ. ಕೃಷ್ಣಶಾಸ್ತ್ರಿ ಬ್ರಾಹ್ಮಣರ ಭಿಕ್ಷೆಗೆ ಸತ್ಯದ ಕವಚ ತೊಡಿಸಲು ಮುಂದಾಗುವುದು ಬ್ರಾಹ್ಮಣರನ್ನು ಮುದಗೊಳಿಸಿದರೆ, ಈ ಸತ್ಯವನ್ನು ಹೇಳುವಾಗ 'ಕಾಯಕ ಜೀವಿಗಳಾದ ಶೂದ್ರರು ದುಡಿದೇ ತಿನ್ನಬೇಕೆಂಬ ನಿಯಮದವರು.......' (ಪುಟ–158) ಎಂಬಂಥ ಮಾತುಗಳನ್ನಾಡುವುದು ಅಬ್ರಾಹ್ಮಣರನ್ನು ರೋಮಾಂಚನಗೊಳಿಸುತ್ತದೆ.

ಹೊಲೆಯರ ದಾವಣಗೆರೆಯ ದುರುಗಪ್ಪನಿಂದ ಗರ್ಭ ಧರಿಸಿದ ಬ್ರಾಹ್ಮಣರ ಸರಸ್ವತಿ ಮತ್ತು ಆಕೆಯ ತಾಯಿ ಯಮುನೆ ಗಣಪಯ್ಯನ ಕ್ರೌರ್ಯವನ್ನು ಪ್ರತಿಭಟಿಸಿ ಗರ್ಭ ತೆಗೆಸದ ದುರುಗಪ್ಪನ ಸಂತಾನ ಬ್ರಾಹ್ಮಣರ ಕ್ಷೇತ್ರದಲ್ಲಿ ಬೆಳೆಯಲು ಅವಕಾಶ ಮಾಡಿಕೊಡುವುದು ದಲಿತರನ್ನು ತುಷ್ಟಿಗೊಳಿಸಿದರೆ, ದುರುಗಪ್ಪ ಅಮಾನುಷವಾಗಿ ಕೊಲೆಯಾಗುವುದು ಬ್ರಾಹ್ಮಣರ ಬಾಯಿ ಮುಚ್ಚಿಸುತ್ತದೆ. ವನದುರ್ಗೆಯಂತಿರುವ ಗೌರಿ ಹೊಲೆಯರ ಕರಿಯನಲ್ಲಿ

ಕೃಷ್ಣನನ್ನು ಕಾಣುವುದು, ತುಂಬ ಸುಖಪಟ್ಟಂತೆ ಅವನೊಂದಿಗೆ ಇರುವುದು, ಅವನು ಕೊಟ್ಟ ಹುಲಿಯುಗುರನ್ನು ತನ್ನ ಕೊರಳಲ್ಲಿ ಧರಿಸುವುದು ಹೊಲೆಯರ ಮೈನವಿರೇಳಿಸಿದರೆ, ಕರಿಯ ಕೊಚ್ಚಿ ಹಾಕಲ್ಪಟ್ಟಿದ್ದು ಬ್ರಾಹ್ಮಣರನ್ನು ನೆಮ್ಮದಿಗೊಳಿಸುತ್ತದೆ. ಇದೇ ಗೌರಿ ಸಾಕ್ಷಾತ್ ಕೊಲ್ಲೂರಿನ ಮೂಕಾಂಬಿಕೆಯಂತೆ, ಮಂಗಳಗೌರಿಯಂತೆ ಇರುವುದು ಬ್ರಾಹ್ಮಣರಿಗೆ ಹೆಮ್ಮೆಯನ್ನುಂಟು ಮಾಡಿದರೆ, ಕಾದಂಬರಿಯಲ್ಲಿ ಬರುವ ಏಕೈಕ ದಲಿತ ಸ್ತ್ರೀ ಪಾತ್ರ ಕರಿಯನ ತಾಯಿಯೂ ಇಲ್ಲಿ ದೇವಿಯಾಗಿರುವುದು ದಲಿತರಿಗೆ ಹೆಮ್ಮೆಯನ್ನು ತಂದುಕೊಡುತ್ತದೆ.

ಕೇಶವ ನಿಮಿತ್ತ ಹೇಳುವುದು, ಜನಿವಾರಕ್ಕೆ ನೂಲು ತೆಗೆಯುವುದು, ಭೂವರಾಹ ಪೂಜೆ ಮಾಡುವುದು, ಪುರಾಣಗಳನ್ನು ಪ್ರವಚನ ಮಾಡುವುದು, ಕುಮಾರವ್ಯಾಸ ಭಾರತವನ್ನು ಹಾಡುವುದು ಬ್ರಾಹ್ಮಣರಿಗೆ ಇಷ್ಟವಾದರೆ ಇದೇ ಕೇಶವ ಕುವೆಂಪು ಅವರನ್ನು, ಕಾರಂತರ 'ಚೋಮನ ದುಡಿ'ಯನ್ನು ಓದಿಕೊಂಡಿರುವುದು ಮತ್ತು ಮಂಜಯ್ಯ ಇಟ್ಟುಕೊಂಡಿದ್ದವಳ ಹೊಟ್ಟೆಯಲ್ಲಿ ಹುಟ್ಟಿದ ವಿನೋದಿಯನ್ನು ಮದುವೆಯಾಗುವುದು ಇತರರಿಗೆ ಒಪ್ಪಿಗೆಯಾಗುತ್ತದೆ. ಹೀಗೆ ಕಾದಂಬರಿ ಏಕಕಾಲದಲ್ಲಿ ಬ್ರಾಹ್ಮಣರನ್ನು ಮತ್ತು ದಲಿತ, ಶೂದ್ರರನ್ನು ಮೆಚ್ಚಿಸುವ ಜಾಡಿನಲ್ಲಿಯೇ ಸಾಗುತ್ತದೆ.

ದಿವ್ಯ ಕಾದಂಬರಿ ಕೇಶವ ವಿನೋದಿನಿಯನ್ನು, ಘನಶ್ಯಾಮ ಗೌರಿಯನ್ನು ಮದುವೆಯಾಗುವ ಸೂಚನೆಯೊಂದಿಗೆ ಮುಕ್ತಾಯವಾಗುತ್ತದೆ. ಗಾಂಧಿ ಆಶ್ರಮದಂತಿರುವ ಕೇಶವನ ದಯಿನೆ ಮನೆಗೂ ನೆಹರೂ ಬಂಗಲೆಯಂತಿರುವ ಘನಶ್ಯಾಮನ ದೇವನಹಳ್ಳಿ ಮನೆಗೂ ನಡುವೆ ವೈವಾಹಿಕ ಸಂಬಂಧವೇರ್ಪಡುವುದು ಎರಡು ಅತಿರೇಕಗಳನ್ನು ಕೂಡಿಸಿ ಹೊಸ ವ್ಯವಸ್ಥೆಯನ್ನು ಕಟ್ಟುವ ಆಶಯವನ್ನು ಅಲ್ಲಗೆಳೆಯುವಂತಿಲ್ಲ. ಆದರೆ ಇಲ್ಲಿನ ಹೊಸ ವ್ಯವಸ್ಥೆಯ ರೂವಾರಿಗಳು ಅಥವಾ ವಾರಸುದಾರರು ಬ್ರಾಹ್ಮಣ್ಯವನ್ನು ರಕ್ಷಿಸುವವರೇ ಆಗಿರುವುದು ಇಲ್ಲಿನ ದೊಡ್ಡ ವಿಪರಾಸ ಸಂಸ್ಕೃತ ಕಲಿಸುವ ಶಾಲೆಯನ್ನು ಆರಂಭಿಸಿದ ಘನಶ್ಯಾಮ ಭೂವರಾಹ ಪೂಜೆಯನ್ನು ಸಮರ್ಥಿಸುವ ಗೌರಿಯನ್ನು ಮದುವೆಯಾಗುವುದು, ಸಂಸ್ಕೃತ ಕಲಿಸುವ ಉದ್ಯೋಗಕ್ಕೆ ತೊಡಗುವ ಕೇಶವ ಈಗಾಗಲೇ ಸಂಸ್ಕೃತ ಕಲಿತಿರುವ; ಭೂವರಾಹ ಪೂಜೆಯನ್ನು ಒಪ್ಪುವ, ವಿನೋದಿನಿಯನ್ನು ಮದುವೆಯಾಗುವಲ್ಲಿ ಯಾವ 'ದಿವ್ಯ' ಅರ್ಥವೂ ಇಲ್ಲ. ಇವೇ ಮೊದಲಾದ ಅಂಶಗಳು ಬ್ರಾಹ್ಮಣ್ಯದ ಪರಿಕಲ್ಪನೆಗಳು ಕಾದಂಬರಿಉದ್ದಕ್ಕು ಗೋಚರಿಸುತ್ತವೆ.